ಮಾಡಿ ಅಜಯನನ್ನು ಹುಡುಕಿಸಿ ಮಾಧವಿಗೆ ಒಪ್ಪಿಸಬೇಕು ಅಂತ ಅಂದುಕೊಳ್ಳುತ್ತಲೇ ಇದ್ದಾರೆ. ಆದರೆ ಅದಕ್ಕೆ ಸರಿಯಾದ ಮಾರ್ಗಗಳೇ ಕಾಣುತ್ತಿಲ್ಲ. ಹುಡುಕಾಟ ಎಲ್ಲಿಂದ ಶುರು ಮಾಡಬೇಕು ಅನ್ನೋದು ಗೊತ್ತಾಗದೆ ಚಡಪಡಿಸುತ್ತಲೇ ಇದ್ದಾರೆ.

ಮಾಧವಿಯ ನಾದಿನಿ, ಅವಳಪ್ಪನ ಆಸ್ತಿಯಲ್ಲಿ ಪಾಲು ಕೇಳ್ತಿರೋದು ಸರಿಯಾಗೇ ಇದೆ. ಆಸ್ತಿ ಕೊಡದೇ ಇದ್ದರೆ ಅವಳು ತಕರಾರು ಮಾಡ್ತಲೇ ಇರ್ತಾಳೆ. ಕೋರ್ಟಿಗೂ ಹೋಗಬಹುದು. ಆಸ್ತಿ ಹಂಚಿಕೊಳ್ಳುವ ಸಮಯದಲ್ಲಾದರೂ ಅಜಯ್ ಇರಬೇಕು. ಅವನು ಪತ್ತೆಯೇ ಆಗದಿದ್ದರೆ? ಹೀಗೆ ಏನೇನೋ ನಕಾರಾತ್ಮಕ ಆಲೋಚನೆಗಳು.

ಮಾಧವಿಯ ಸ್ಥಿತಿಯನ್ನೇ ನೆನಪು ಮಾಡಿಕೊಂಡು ಕೊರಗುವ ಬದಲು ರಾಯಲಸೀಮೆಯ ಗೆಳೆಯರು, ಪರಿಚಯದವರಿಗೆಲ್ಲ ಅಜಯನ ಫೋಟೊ ಕಳಿಸಿ ನನಗಾಗಿ, ನಿಮ್ಮ ಎಲ್ಲಾ ಕೆಲಸ ಕಾರ್ಯಗಳನ್ನು ಬಿಟ್ಟು ಅವನನ್ನು ಹುಡುಕಿಸಿ ಕೊಡಿ ಅಂತ ಕೇಳಿಕೊಳ್ಳಬೇಕು. ಸಾಧ್ಯವಾದರೆ ತಾವೇ ಅನಂತಪುರಕ್ಕೂ ಹೋಗಿ ಬರಬೇಕು ಎನ್ನುವ ನಿರ್ಧಾರಕ್ಕೆ ಬಂದರು.

★★★

ನಿರೀಕ್ಷೆಯಂತೆ ರಾಯಲಸೀಮೆಯಲ್ಲಿರುವ ಅವರ ಗೆಳೆಯರು ಸ್ಪಂದಿಸಿದರು. ಒರಿಸ್ಸಾದ ಗಡಿಯವರೆಗೂ ನಮ್ಮವರನ್ನು ಕಳಿಸಿ ನಿಮ್ಮ ಹುಡುಗನನ್ನು ಹುಡುಕಿಸಿಕೊಡುತ್ತೇವೆ ಅನ್ನೋ ಭರವಸೆ ಕೊಟ್ಟರು.

ಹತ್ತು ವರ್ಷಗಳಿಂದೀಚೆಗೆ ಸಂಘಟನೆ ಒಡೆದು ಚೂರು ಚೂರಾಗಿದೆಯಂತೆ. ದಿನಕ್ಕೊಂದು ಹೊಸ ಗುಂಪು, ಅದಕ್ಕೊಬ್ಬ ನಾಯಕ ಹುಟ್ಟಿಕೊಳ್ತಿದಾನೆ. ಎಲ್ಲರೂ ರೋಲ್‌ಕಾಲ್ ಗಿರಾಕಿಗಳೇ. ಈಗ ಬೊಬ್ಬಿಲಿ ಕಡೆಯವನೊಬ್ಬನ ಪಾರುಪತ್ಯ ಇಲ್ಲಿ ಶುರುವಾಗಿದೆ. ನಿಮ್ಮ ಹುಡುಗ ಅವನ ಗುಂಪು ಸೇರಿದ್ದರೆ ಹುಡುಕೋದು ಕಷ್ಟ ಅಂತ ಕಡಪಾದ ಗೆಳೆಯನೊಬ್ಬ ಹೇಳಿದ್ದನ್ನು ಕೇಳಿದ ಮೇಲೆ ಪ್ರೊಫೆಸರು ಚಿಂತೆಗೊಳಗಾದರು.

ತಾವೇ ಹೋಗಿ ಆ ಬೊಬ್ಬಿಲಿಯನ್ನು ಕಂಡು, ಇರೋ ವಿಷಯವನ್ನು ಹೇಳಿ ಅಜಯನನ್ನು ಕಳಿಸಿಕೊಡು ಅಂತ ಕೇಳಬೇಕು ಅನ್ನೋ ನಿರ್ಧಾರ ಮಾಡಿದ ಮೇಲೆ ಸ್ವಲ್ಪ ಸಮಾಧಾನವಾಯಿತು. ಪ್ರತಿ ದಿನವೂ ಫೋನ್ ಮಾಡಿ ಹುಡುಕಾಟದ ಮಾಹಿತಿ ಪಡೆದುಕೊಳ್ಳುವುದಕ್ಕಾಗಿ ಅವರ ವಿದ್ಯಾರ್ಥಿಗಳ ಹೆಸರಿನಲ್ಲಿ ಕೆಲವು ಕೆಲ ಸಿಮ್ ಖರೀದಿಸಿದರು. ಬೇರೆಯವರಿಂದ ಫೋನ್ ಮಾಡಿಸಿದರು. ಇಪ್ಪತ್ತು ದಿನಗಳು ಕಳೆದರೂ ಅಜಯನ ಸುಳಿವು ಸಿಕ್ಕಲಿಲ್ಲ.

ಬಳ್ಳಾರಿ, ಅನಂತಪುರ, ಕಡಪಾ, ಕರ್ನೂಲು, ಒರಿಸ್ಸಾದ ಗಡಿ ವರೆಗೆ ಸಕ್ರಿಯರಾಗಿರುವ ಸಂಘಟನೆಗಳಲ್ಲಿ ಇರೋರನ್ನೆಲ್ಲ ವಿಚಾರಿಸಿದ್ವಿ. ನಿಮ್ಮ ಹುಡುಗ ಅಜಯ್‌ನ ಸುಳಿವು ಸಿಗುತ್ತಿಲ್ಲ. ಬಳ್ಳಾರಿ ಸುತ್ತ ಮುತ್ತ ಒಂದು ಗುಂಪು ಈಗ ಸಕ್ರಿಯವಾಗಿದೆ ಅನ್ನೋ ಸಮಾಚಾರ ಸಿಕ್ಕಿದೆ. ನಿಮ್ಮ ಹುಡುಗ ಆ ಗುಂಪಿನಲ್ಲಿ ಇರಬಹುದೇನೊ ಅನ್ನೋ ಗುಮಾನಿ ನಮ್ಮದು. ಅಲ್ಲಿಗೂ ಯಾರನ್ನಾದರೂ ಕಳಿಸಿ ವಿಚಾರಿಸ್ತೀನಿ... ಅವನು ಆಂಧ್ರ, ತೆಲಂಗಾಣ ದಾಟಿ ಮುಂದೆ ಹೋಗಿರೊ ಚಾನ್ಸ್ ಇಲ್ಲ ಅಂತ ಅನಂತಪುರದ ಕಾಲೇಜೊಂದರಲ್ಲಿ ಉಪನ್ಯಾಸಕನಾಗಿರುವ ಶಿಷ್ಯನೊಬ್ಬ ಮಾಹಿತಿ ನೀಡಿದ ಮೇಲೆ ಪ್ರೊಫೆಸರ್ ತಲೆ ಕೆಟ್ಟುಹೋಯಿತು.

ಅಜಯನಿಗೆ ಕೆಲವೇ ದಿನಗಳಲ್ಲಿ ನಿರಾಸೆ ಆಗುತ್ತೆ. ಆ ಮೇಲೆ ಅವನು ಹಿಂಸೆಯ ಮಾರ್ಗ ಹಿಡಿಯಬಹುದು ಅಥವಾ ಮನೆಗೆ ಹಿಂದಿರುಗಬಹುದು. ಹಿಂಸೆಯ ದಾರಿ ಆರಿಸಿಕೊಂಡಿದ್ದರೆ ಅವನನ್ನು ಹುಡುಕಿಸಿಯೂ ಪ್ರಯೋಜನ ಇಲ್ಲ. ಅವನು ಪೊಲೀಸರ ಹಿಟ್ ಲಿಸ್ಟ್‌ನಲ್ಲಿ ಇರ್ತಾನೆ ಅನ್ನಿಸತೊಡಗಿತು. ಮರುಕ್ಷಣವೇ ಹಾಗಾಗದೇ ಇರಲಿ ಅಂತ ಮನಸ್ಸಿನಲ್ಲಿಯೇ ಪ್ರಾರ್ಥಿಸಿದರು.